


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68　　ಸಂಚಿಕೆ –36　　ದಿನಾಂಕ : 18-03-2026


## ರೋಟರಿ ಕ್ಲಬ್ ಶಿವಮೊಗ್ಗದ ಎಲ್ಲಾ ರೋಟರಿ ಬಂಧುಗಳಿಗೂ ಸಮಸ್ತ ಕುಟುಂಬದವರಿಗೂ ಪರಾಭವ ನಾಮ ಸಂವತ್ಸರದ ಹಾಗೂ ಯುಗಾದಿಯ ಶುಭಾಶಯಗಳು

ದಿನಾಂಕ: 18.03.2026 ರ ಬುಧವಾರದಂದು ನಮ್ಮ ವಾರದ ಸಭೆಯಲ್ಲಿ ವಿಶೇಷ ಕಾರ್ಯಕ್ರಮ: ಯುಗಾದಿ ಹಬ್ಬದ ಪ್ರಯುಕ್ತ ಮತ್ತು ಬೇವು ಬೆಲ್ಲದ ಸಮ್ಮಿಲನ ಬದುಕಿಗೆ ಪಾಠ" ವಿಷಯದೊಂದಿಗೆ ಹಂದಲಸು ಶ್ರೀ ರಾಘವೇಂದ್ರ ಭಟ್ಟರವರಿಂದ ಹಬ್ಬದ ವಿಶೇಷತೆ ಮತ್ತು ಬೇವು ಬೆಲ್ಲದ ಮಹತ್ವದ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಏರ್ಪಾಡಾಗಿತ್ತು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾದ ಹಂದಲಸು ಶ್ರೀ ರಾಘವೇಂದ್ರ ಭಟ್, ಸಂಸ್ಥೆಯ ಅಧ್ಯಕ್ಷರಾದ ರೊ. ಆರ್.ಆನಂದ್ ಮತ್ತು ಕಾರ್ಯದರ್ಶಿ ವಿಶ್ವಾಸ್ ಎಲಬುರ್ಗಿ ಉಪಸ್ಥಿತರಿದ್ದರು. ಕಾರ್ಯದರ್ಶಿಗಳು ಅಧ್ಯಕ್ಷರಿಗೆ ಕಾಲರ್ ತೊಡಿಸುವ ಮೂಲಕ ಸಭೆಯನ್ನು ಚಾಲನೆಗೆ ತರಲಾಯಿತು.




ಪಿಹೆಚ್‌ಎಫ್ ಶ್ರೀ ಜಿ. ಸತ್ಯನಾರಾಯಣರವರಿಂದ "ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವು" ಎಂಬ ಪುರಂದರ ದಾಸರ ಕೀರ್ತನೆಯ ಸುಶ್ರಾವ್ಯ ಗಾಯನದ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಯಿತು. ಸಂಸ್ಥೆಯ ಮಾಜಿ ಅಧ್ಯಕ್ಷರಾದ ರೊ. ವೀರಣ್ಣ ಎ. ಹುಗ್ಗಿಯವರಿಂದ ಸ್ವಾಗತವಾಯಿತು. ಕಾರ್ಯದರ್ಶಿ ರೊ.ವಿಶ್ವಾಸ್‌ಎಲಬುರ್ಗಿಯವರು ಪ್ರಕಟಣೆ ನೀಡಿದರು.

ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು ಮುಖ್ಯ ಅತಿಥಿಗಳಾದ ಶ್ರೀ ಹಂದಲಸು ರಾಘವೇಂದ್ರ ಭಟ್‌ರವರ ಪರಿಚಯ ಮಾಡಿದರು. ಶಿವಮೊಗ್ಗ ನಗರದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತ್ರಿವೇದಿವೇದಪಾಂಡಿತ್ಯ, ಪೌರೋಹಿತ್ಯ ಮತ್ತು ಯಕ್ಷಗಾನ ತಾಳಮದ್ದಳೆಗಳ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನಿತ್ತ ಪೂಜ್ಯ ಶ್ರೀ ಹಂದಲಸು ಲಕ್ಷ್ಮೀನಾರಾಯಣ ಭಟ್ಟರು ಮತ್ತು ಶ್ರೀಮತಿ ಜಯಲಕ್ಷ್ಮಿ ಭಟ್ಟರ ಸುಪುತ್ರರಾಗಿ ಜನಿಸಿದ ಇವರು ಹಿರಿಯರ




ಧ್ಯೇಯೋದ್ದೇಶಗಳನ್ನು ಉಳಿಸಿ ಬೆಳೆಸುವತ್ತ ಮುನ್ನಡೆದಿದ್ದಾರೆ ಹಾಗೂ ಅದರಲ್ಲಿ ಪಾರಮ್ಯವನ್ನು ಪಡೆದಿದ್ದಾರೆ. ಶಿವಮೊಗ್ಗದಲ್ಲಿ ಪ್ರೌಢ ಅಧ್ಯಯನದ ನಂತರ ಸಂಸ್ಕೃತದಲ್ಲಿ ಎಂ.ಎ.ಮತ್ತು ಎಂ.ಫಿಲ್ ಪದವಿ ಪಡೆದು ಚಿಕ್ಕ ವಯಸ್ಸಿನಲ್ಲೇ ಅಪೂರ್ವವಾದ ವಿದ್ವತ್ತನ್ನು ಜ್ಯೋತಿಷ್ಯ ಶಾಸ್ತ್ರದಲ್ಲಿ ಗಳಿಸಿರುತ್ತಾರೆ. ಜೊತೆಗೆ ಹಿಂದಿ ಭಾಷೆಯಲ್ಲಿ ರಾಷ್ಟ್ರಭಾಷಾ ವಿಶಾರದ ಮತ್ತು ವೇದಾಧ್ಯಯನದಲ್ಲಿ ಪಾಂಡಿತ್ಯವನ್ನು ಪಡೆದು

## ಈ ವಾರದ ಸಭೆ

**ದಿನಾಂಕ: 25–03–2026, ಬುಧವಾರ　　ಸಂಜೆ 7:00 ರಿಂದ**

## ಕೌಟುಂಬಿಕ ಸ್ನೇಹ ಮಿಲನ



**ಹೊಂಗಿರಣ,** ಶಿವಮೊಗ್ಗ ಅಭಿನಯಿಸುವ ನಾಟಕ

## ವಿಪುಲ ರೂಪ ಧಾರಿಣಿ

(ಜಿ.ಎಸ್.ಎಸ್. ಕವನಗಳ ಆಧಾರಿತ ಕಾವ್ಯಾಭಿನಯ)

ವಿನ್ಯಾಸ-ನಿರ್ದೇಶನ: **ಡಾ. ಶ್ರೀಪಾದ ಭಟ್, ಡಾ. ಸಾಸ್ವೇಹಳ್ಳಿ ಸತೀಶ್**

ಕಾರ್ಯಕ್ರಮದ ನಂತರ ಭೋಜನವಿದೆ.

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













ಜ್ಯೋತಿಷಿಯಾಗಿ, ಪುರೋಹಿತರಾಗಿ ಸೇವೆ ಸಲ್ಲಿಸುತ್ತಾ ಜನ ಮನ್ನಣೆ ಗಳಿಸಿರುತ್ತಾರೆ. ಉಜ್ಜಯಿನಿ, ಮೈಸೂರು, ಬೆಂಗಳೂರು, ಮಲೆನಾಡು ಪ್ರಾಂತ್ಯಗಳು ಮತ್ತು ರಾಷ್ಟ್ರದ ನಾನಾ ಕಡೆಗಳಲ್ಲಿ ಸಂಸ್ಕೃತ ಭಾಷೆಯ ಬೆಳವಣಿಗೆ, ಪೌರೋಹಿತ್ಯ, ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ, ಕಾರ್ಯಾಗಾರ, ವಿದ್ವತ್ ಸಭೆ, ಸಮ್ಮೇಳನಗಳಲ್ಲಿ ಭಾಗವಹಿಸಿ, ತಮ್ಮ ವಿದ್ವತ್ ಜ್ಞಾನವನ್ನು ಪ್ರದರ್ಶಿಸುತ್ತಿರುವುದು ಬಹಳ ಹೆಮ್ಮೆಯ ಸಂಗತಿಯಾಗಿದೆ. ಶಿವಮೊಗ್ಗೆಯ ವಿದ್ಯಾಭಾರತಿ ಕಾಲೇಜು, ಸಹ್ಯಾದ್ರಿ ಕಾಲೇಜು, ಜ್ಯೋತಿ ವಿಜ್ಞಾನ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವುದು ಅಭಿನಂದನೀಯ ವಿಷಯವಾಗಿದೆ.

ಅಂದಿನ ಮುಖ್ಯ ಅತಿಥಿಗಳಾದ ಹಂದಲಸು ಶ್ರೀ ರಾಘವೇಂದ್ರ ಭಟ್ಟರವರು ಮಾತನಾಡಿ, ಯಾವುದೇ ಹಬ್ಬವಾಗಲಿ, ಅದರ ಆಚರಣೆಯ ಬಗ್ಗೆ ತಿಳಿದುಕೊಂಡು ಆಚರಿಸಿಕೊಂಡರೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟರು. ನಾಳೆ ಬರಲಿರುವ ಹಬ್ಬ ಯುಗಾದಿ. ಇದು ಸಂವತ್ಸರದ ಅಂತ್ಯವಲ್ಲ, ಮತ್ತೊಂದರ ಪ್ರಾರಂಭವಾಗಿದೆ. ಈಗಾಗಲೇ ಪ್ರಪಂಚದಲ್ಲಿ ಕೃತಯುಗ, ತ್ರೇತಾಯುಗ, ದ್ವಾಪರ ಯುಗವಾಗಿದ್ದು, ಹಾಲಿ ನಾವುಗಳು ಕಲಿಯುಗದಲ್ಲಿರುವುದು ಎಲ್ಲರಿಗೂ ವೇದ್ಯ. ಹಿಂದೂಧರ್ಮದ ಸಾಂಪ್ರದಾಯಿಕವಾದಂತಹ ಕಾಲ ಶಾಸ್ತ್ರದ ಅನುಗುಣವಾಗಿ ಆರಂಭದ ದಿನಗಳು ಅಂದರೆ, ಕೃತಯುಗದ ಆರಂಭ ಕಾರ್ತೀಕ ಮಾಸದಲ್ಲಿ, ತ್ರೇತಾಯುಗದ ಆರಂಭ ವೈಶಾಖ ಮಾಸದಲ್ಲಿ, ದ್ವಾಪರಯುಗದ ಪ್ರಾರಂಭ ಮಾಘ ಮಾಸ ಕೃಷ್ಣ ಪಕ್ಷದಲ್ಲಿ ಮತ್ತು ಕಲಿಯುಗದ ಆರಂಭ ಚೈತ್ರಮಾಸದಲ್ಲಾಗಿರುತ್ತದೆ. 60 ಸಂವತ್ಸರಗಳಲ್ಲಿ ಪರಾಭವನಾಮ ಸಂವತ್ಸರವೂ ಒಂದು. ಮೊದಲನೇ ದಿನ ಚಾಂದ್ರಮಾನ ಯುಗಾದಿ. ಕೆಲವೇ ದಿನಗಳ ನಂತರದಲ್ಲಿ ಸೌರಮಾನ ಯುಗಾದಿ ಇದೆ. ಅದು ಮೀನರಾಶಿಯಿಂದ ಮೇಷ ರಾಶಿಗೆ ಪ್ರವೇಶದ ದಿನವಾಗಿದೆ.

ಹಬ್ಬದ ದಿನದಂದು ಬೆಳಗಿನ ಜಾವ ಅಭ್ಯಂಜನ ಸ್ನಾನ ಮುಗಿಸಿ, ದೇವರ ಪೂಜೆಯೊಂದಿಗೆ ಬೇವು ಬೆಲ್ಲ ಸಮರ್ಪಣೆ. ನಿಜವಾಗಿ ಅದು ಬೇವು ತುಪ್ಪವಾಗಿದೆ. ಬೇವು 72% ಪ್ರಮಾಣದಲ್ಲಿ ಇದ್ದರೆ 28% ಪ್ರಮಾಣದಲ್ಲಿ ತುಪ್ಪ ಅಥವಾ ಬೆಲ್ಲವಿರಬೇಕು. ಇದರರ್ಥ ಕಷ್ಟವನ್ನು ಎದುರಿಸಲು ಮೊದಲ ಪ್ರಯತ್ನ ನಂತರ ಸುಖ. ಪುಣ್ಯಾಹ ಕಾರ್ಯಕ್ರಮದಲ್ಲಿ ನೀಡುವ ಪಂಚಗವ್ಯದಲ್ಲಿ ಎಲ್ಲ ಅಂಶಗಳು ಸಮನಾಗಿ ಸೇರಿಸಿದ್ದರೂ ಅದನ್ನು ಸೇವಿಸುವುದು ಕೆಲವರಿಗೆ ಕಷ್ಟದಾಯಕವಾಗುತ್ತದೆ. ಕಷ್ಟದ ವಿಚಾರ ಬಂದಲ್ಲಿ, ದೇವತೆಗಳಿಗೆ ಮತ್ತು ರಾಜರುಗಳಿಗೆ ಕಷ್ಟವಿಲ್ಲವೆಂದಿಲ್ಲ. ಅವರುಗಳೆಲ್ಲ ಲೋಕದ ಸುಖಕ್ಕಾಗಿ ಕಷ್ಟ ತೆಗೆದುಕೊಂಡಿದ್ದಾರೆ, ಸ್ವೀಕರಿಸಿದ್ದಾರೆ, ಅನುಭವಿಸಿದ್ದಾರೆ. ಶ್ರೀರಾಮನು 14 ವರ್ಷಗಳ ಕಾಲ ಅರಣ್ಯದಲ್ಲಿ ವಾಸ ಮಾಡಿದರು. ಪ್ರಜೆಗಳಿಗೆ ಅದನ್ನರಗಿಸಿಕೊಳ್ಳಲು ಕಷ್ಟವಾಯಿತು. ಪಾಂಡವರಿಗೆ ಅಜ್ಞಾತವಾಸ ಕಷ್ಟವೆನಿಸಲಿಲ್ಲ. ನೋಡುವವರಿಗೆ ಕಷ್ಟವಾಯಿತು. ಆ ಎಲ್ಲಾ ಕಷ್ಟಗಳ ನಂತರ ಅವರಿಗೆ ರಾಜ್ಯ ಪ್ರಾಪ್ತಿಯಾಯಿತು. ಬ್ರಹ್ಮನಿಗೆ ಸೃಷ್ಟಿ ಮಾಡುವುದೇ ಕಷ್ಟ. ವಿಷ್ಣು ದೇವರಿಗೆ 10 ಅವತಾರಗಳು ಕಷ್ಟವಾದರೂ, ಶಿವ ಬ್ರಹ್ಮ ಕಪಾಲ ಕಷ್ಟವಾದರೂ ಇದರಿಂದ ಲೋಕಕ್ಕೆ ಸುಖ ದೊರಕಿತು. ಸಂಚಾರವೇ ಕಷ್ಟ, ಆದರೆ ಸೂರ್ಯನಿಗೆ ಸಂಚಾರ ಕಷ್ಟವಾದರೂ, ಜ್ಞಾನ, ಸುಖ ನೀಡಿದನು. ಇವುಗಳೆಲ್ಲಾ ನಮಗೆ ದಿನ ನಿತ್ಯದ ಪಾಠವಾಗಬೇಕು ಎಂದರು.

ಮುಂದುವರೆದ ಮುಖ್ಯ ಅತಿಥಿಗಳಾದ ಶ್ರೀರಾಘವೇಂದ್ರ ಭಟ್‌ರವರು ನಾಳೆ ಯುಗಾದಿ ಆರಂಭ. ಅದು ಗುರುವಾರ ಬಂದಿದೆ. ಶುಭದಿನ ಗುರುಗಳ ದಿನ. ಯಾರೂ ಹೆದರಬೇಕಾಗಿಲ್ಲ. ಪರಾಭವ ಎಂದರೆ ಸೋಲು ಎಂದರ್ಥ. ಆದರೆ ಯಾವುದಕ್ಕೆ ಸೋಲು, ಕಷ್ಟಗಳಿಗೆ ಸಾಲಗಳಿಗೆ ಸೋಲಾಗಲಿ. ಪ್ರತೀ ವಿಚಾರಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳದೇ, ಧನಾತ್ಮಕವಾಗಿ ತೆಗೆದುಕೊಳ್ಳಿ.

ಪರಾಭವ ನಾಮ ಸಂವತ್ಸರದಲ್ಲಿ, ಗುರು ರಾಜನಾಗಿರುತ್ತಾನೆ. ಅಂಗಾರಕ (ಮಂಗಳ) ಮಂತ್ರಿಯಾಗಿರುತ್ತಾನೆ. ಚಂದ್ರನಿಗೆ ಶುಕ್ಲ ಪಕ್ಷದಲ್ಲಿ 23 ದಿವಸ ಶುಭಚಂದ್ರ. ಇದರಿಂದ ಬುಧ ಚಂದ್ರನಿಗೆ, ಗುರು ಶುಕ್ರನಿಗೆ ಪೂರ್ಣ ಲಾಭ. ಆದುದರಿಂದಲೇ ಅಧಿಕ ಮಾಸ ಉಂಟಾಗುತ್ತದೆ.

**ಸಂವತ್ಸರದ ಫಲ:** ರಾಜರುಗಳಿಂದ ಯುದ್ಧ ಸನ್ನಿವೇಶಗಳ ಸೃಷ್ಟಿ. (ಈಗಾಗಲೇ ಯುದ್ಧ ಆರಂಭವಾಗಿದೆ) ಅಲ್ಪವೃಷ್ಟಿ, ಸಸ್ಯ ಸಂಪತ್ತು ಸಾಮಾನ್ಯ. ಸಂವತ್ಸರದ ಫಲ 25% ಗ್ರಹಗಳ ಫಲ 75% ಆಗಿರುತ್ತದೆ. ಭೂದೇವ ವೈದಿಕರೆಲ್ಲರೂ ಯಾಗ ಯಜ್ಞಗಳನ್ನು ಮಾಡುತ್ತಾರೆ. ಗುರುಗ್ರಹದ ಮೂಲಕ ಯಾಗ ಯಜ್ಞಗಳಾಗುತ್ತವೆ. ಮಂಗಳ ಮಂತ್ರಿ ರಾಜ ಅಧರ್ಮ ನಿರತರಾಗುತ್ತಾರೆ. ಚೋರ ಮಂತ್ರಿ ಭಯವಿರುತ್ತದೆ. ಗುರು ಪೂರ್ಣವಾಗಿದ್ದಲ್ಲಿ ಉತ್ತಮ ಫಲ ನೀಡುತ್ತಾನೆ. ಈ ವರ್ಷದ್ದು ಅಧಿಕ ಮಾಸ. 354 ಚಂದ್ರ ದಿವಸ ಉಳಿದಿದ್ದು 365 ದಿವಸ ಅಂದರೆ 11 ದಿವಸಗಳು ಅಧಿಕವಾಗಿದೆ.


ನವಗ್ರಹಗಳು ನಮಗೆ ಒಳ್ಳೆಯದನ್ನೇ ಮಾಡುತ್ತವೆ. ಅವುಗಳೆಲ್ಲಾ

ಆತ್ಮಸ್ವರೂಪಗಳೇ ಆಗಿವೆ. ಚಂದ್ರನಿಂದ ಮನಸ್ಸಿಗೆ ನೆಮ್ಮದಿ. ಅಂಗಾರಕನಿಂದ ಧೈರ್ಯ. ಬುಧನಿಂದ ವಿದ್ಯೆ, ಗುರುವಿನಿಂದ ಜ್ಞಾನ. ಶುಕ್ರನಿಂದ ಸುಖ. ಶನಿಯಿಂದ ಭಯಭೀತಿ ನಿವಾರಣೆ. ರಾಹು ಕೇತುಗಳಿಂದ ಆಯುಷ್ಯ ಮತ್ತು ಕೀರ್ತಿ ವೃದ್ಧಿಯಾಗುತ್ತದೆ ಎಂದರು. ಪ್ರತಿಯೊಂದು ಗ್ರಹಗಳಿಗೂ ಅವುಗಳದೇ ಆದ ದೇವತೆಗಳಿವೆ ಅವೆಲ್ಲವೂ ಮಾನವರಿಗೆ ಒಳಿತನ್ನುಂಟು ಮಾಡುತ್ತವೆ. ತಂದೆತಾಯಿ, ಹಿರಿಯರನ್ನು ಗೌರವಿಸಿ. ಅವರುಗಳು ನಮ್ಮ ಒಳಿತನ್ನು ಹರಸುತ್ತಾರೆ.

ಇಡೀ ಪ್ರಪಂಚವೇ ನವಗ್ರಹಗಳ ಅಧೀನವಾಗಿವೆ. ತೇಜಸ್ಸಿನ ತತ್ವಕ್ಕೆ ಅಂಗಾರಕನಿದ್ದಾನೆ. ವ್ಯಕ್ತಿಯ ವಿಕಾಸವೂ ಗ್ರಹಗಳಿಂದಾಗುತ್ತವೆ. ಕಾಲದ ಜ್ಞಾನವು ಗ್ರಹಗಳ ಮೂಲಕ ಗೊತ್ತಾಗುತ್ತದೆ. ಎಲ್ಲವೂ ಗ್ರಹಗಳಿಂದಲೇ ನಡೆಯುವುದು. ಕರ್ಮ ಸಿದ್ಧಾಂತ ನಮ್ಮ ವಿಕಾಸಕ್ಕೆ ಕಾರಣವಾಗುತ್ತದೆ ಎಂದರು.


ರೊ. ಎನ್.ವಿ.ಭಟ್ ಮತ್ತು ರೊ. ಭೂಪಾಳಂ ಸತ್ಯನಾರಾಯಣ ರವರು ಕೆಲವು ಪ್ರಶ್ನೆಗಳನ್ನು ಕೇಳಿ ಮುಖ್ಯ ಅತಿಥಿಗಳಿಂದ ಉತ್ತರ ಪಡೆದರು. ಇದೇ ಸಂದರ್ಭದಲ್ಲಿ ಮಾರ್ಚ್ 12 ರಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ರೊ.ನಿರ್ಮಲಾ ಶಿವಾನಂದ ರವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು.


ಅಧ್ಯಕ್ಷರಾದ ರೊ.ಆನಂದರವರು ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಇಂದಿನ ಮುಖ್ಯ ಅತಿಥಿಗಳಾದ ಹಂದಲಸು ಶ್ರೀ ರಾಘವೇಂದ್ರ ಭಟ್ಟರು, ಬೇವು ತುಪ್ಪದ ಬಗ್ಗೆ, ನವಗ್ರಹಗಳ ನಡೆ ಮತ್ತು ವಿಶೇಷತೆಗಳ ಬಗ್ಗೆ ತಮ್ಮ ಉಪನ್ಯಾಸದಲ್ಲಿ ನಮ್ಮ ಕಣ್ಣು ತೆರೆಸಿದ್ದಾರೆ. ಅವರಿಗೆ ಕೃತಜ್ಞತೆಗಳನ್ನು ತಿಳಿಸಿ, ಗೌರವಾರ್ಥವಾಗಿ ನೆನಪಿನ ಕಾಣಿಕೆಯೊಂದನ್ನು ರೊ.ಪಿಎಜಿಎನ್.ಎಸ್. ಶ್ರೀಧರ್ ಮೂಲಕ ಕೊಡಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು.










## Rotary District Project











## ಸಂಪಾದಕೀಯ

### ಪ್ರಚೋದನೆಗೆ ಪ್ರತಿಕ್ರಿಯಿಸಬೇಕಿಲ್ಲ

ಒಂದು ಆನೆ ನದಿಯಲ್ಲಿ ಸ್ನಾನ ಮಾಡಿ ತನ್ನ ದಾರಿಯಲ್ಲಿ ಸಾಗುತ್ತಿತ್ತು. ಅದು ಒಂದು ಸೇತುವೆಯನ್ನು ಸಮೀಪಿಸುತ್ತಿದ್ದಂತೆ, ವಿರುದ್ಧ ದಿಕ್ಕಿನಿಂದ ಬಂದ ಹಂದಿಯೊಂದು ಕೊಳಕು ಕೆಸರಿನಲ್ಲಿ ಪೂರ್ತಿ ತೊಯ್ದಿರುವುದನ್ನು ಗಮನಿಸಿತು. ಆನೆ ಶಾಂತವಾಗಿ ಒಂದು ಬದಿಗೆ ಸರಿದು, ಕೊಳಕು ಹಂದಿಯನ್ನು ಹಾದುಹೋಗಲು ಅವಕಾಶ ಮಾಡಿಕೊಟ್ಟು, ನಂತರ ತನ್ನ ದಾರಿಯಲ್ಲಿ ಸಾಗಿತು.

'ನಾನು ಎಷ್ಟು ದೊಡ್ಡವನಾಗಿದ್ದೇನೆ ನೋಡಿ; ಆನೆ ಕೂಡ ನನ್ನನ್ನು ನೋಡಿ ಭಯಭೀತಗೊಂಡು ಒಂದು ಬದಿಗೆ ಸರಿದು ನಾನು ಹಾದುಹೋಗಲು ಅವಕಾಶ ಮಾಡಿಕೊಟ್ಟಿತು' ಎಂದು ಹಂದಿ ನಂತರ ತನ್ನ ಗೆಳೆಯರಿಗೆ ಹೆಮ್ಮೆಯಿಂದ ಹೇಳಿಕೊಂಡಿತು. ಇದನ್ನು ಕೇಳಿದ ಹಲವಾರು ಆನೆಗಳು ತಮ್ಮ ಸ್ನೇಹಿತನ ಕ್ರಿಯೆಗಳನ್ನು ಪ್ರಶ್ನಿಸಿದವು. 'ನೀನು ಪಕ್ಕಕ್ಕೆ ಸರಿದಿದ್ದು ಭಯದಿಂದಲೇನಾ?'

'ನಾನು ಹಂದಿಯನ್ನು ನನ್ನ ಕಾಲಿನ ಕೆಳಗೆ ಸುಲಭವಾಗಿ ತುಳಿಯಬಹುದಿತ್ತು' ಎಂದು ಹೇಳಿದ ಆನೆ ಮುಂದುವರಿದು, 'ಆದರೆ ನಾನು ಸ್ವಚ್ಛವಾಗಿದ್ದೆ. ಹಂದಿ ತುಂಬಾ ಕೊಳಕಾಗಿತ್ತು. ಇದಲ್ಲದೆ ಅದನ್ನು ತುಳಿಯುವುದರಿಂದ ನನ್ನ ಕಾಲು ಹೊಲಸು ಕೆಸರುಮಯವಾಗುತ್ತಿತ್ತು. ಅದನ್ನು ತಪ್ಪಿಸಲೆಂದೇ ನಾನು ದೂರ ಸರಿದೆ' ಎಂದು ಹೇಳಿತು.

ನಾವು ಕೆಲಸ ಮಾಡುವ ಕಚೇರಿಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಅಥವಾ ನಮ್ಮ ಸಮಾಜ ಮತ್ತು ಕುಟುಂಬಗಳಲ್ಲಿಯೇ ನಮ್ಮ ದೃಷ್ಟಿಕೋನಗಳನ್ನು, ನಮ್ಮ ವಿಚಾರಗಳನ್ನು ಒಪ್ಪದ, ವಿತಂಡವಾದ ಮಾಡುವ, ಮೈ ಮನಸ್ಸುಗಳಲ್ಲಿಯೇ ದ್ವೇಷ, ನಂಜನ್ನೇ ತುಂಬಿಕೊಂಡ ವ್ಯಕ್ತಿಗಳು ಇರುತ್ತಾರೆ. ಅವರ ಕೆಲಸ ನೀವು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ಮೂಗು ತೂರಿಸಿ ನಿಮ್ಮನ್ನು ಅವಮಾನಿಸುವುದೋ ಇಲ್ಲ ನೀವು ಮಾಡಿದ ಕೆಲಸ ಸರಿಯಿಲ್ಲ ಎಂದು ಸಾಬೀತು ಮಾಡುವುದೋ ಆಗಿರುತ್ತದೆ. ಅದಕ್ಕಾಗಿ ಯಾವ ಮಾರ್ಗವನ್ನು ಅನುಸರಿಸಲೂ ಹಿಂಜರಿಯುವುದಿಲ್ಲ.

ಒಬ್ಬ ಬುದ್ಧಿವಂತ ವ್ಯಕ್ತಿಯು ನಕರಾತ್ಮಕ ವ್ಯಕ್ತಿಗಳಿಂದ ಅಂತರ ಕಾಪಾಡಿಕೊಳ್ಳುವುದು, ಅವರ ಸಂಪರ್ಕವನ್ನು ತಪ್ಪಿಸುವುದು ಭಯದಿಂದಲ್ಲ. ಬದಲಾಗಿ ತಾವೆಷ್ಟೇ ಶಕ್ತಿಶಾಲಿಯಾಗಿದ್ದರೂ ಕೆಲವೊಮ್ಮೆ ಕೆಲವರ ನಕಾರಾತ್ಮಕತೆ, ದೋಷಯುಕ್ತ ಆಲೋಚನೆಗಳು, ನಮ್ಮನ್ನು ತೀವ್ರವಾಗಿ ಪ್ರಭಾವಿಸಲು ಪ್ರಚೋದಿಸುವಂತಿರುತ್ತವೆ. ನಾವು ಪ್ರತಿಯೊಂದು ವಿರುದ್ಧ ದೃಷ್ಟಿಕೋನ, ಪ್ರತಿಯೊಂದು ಮಾತು ಅಥವಾ ಪ್ರತಿಯೊಂದು ಸನ್ನಿವೇಶಕ್ಕೂ ಪ್ರತಿಕ್ರಿಯಿಸುವ ಅಗತ್ಯವಿರುವುದಿಲ್ಲ. ಸಂಯಮದಿಂದ ವಿವೇಚನೆಯಿಂದ ನಮ್ಮ ದಾರಿಯಲ್ಲಿ ಬದಲಿಸಿಕೊಂಡರೆ ಸಾಕು.

• ರೊ. ಎಂ. ಮಾಧವಾಚಾರ್



### ಮುದ್ದುರಾಮನ ಚೌಪದಿ...

ಬೇಕು ಬೇಕೆನುವಾತ ಲೋಕದಲಿ ಬಲು ದುಃಖಿ
ಸುಖಿ ಯಾರು? ಸಾಕೆನುತ ನಗುತಲಿರುವಾತ
ಸಂತಸಕೆ ಆಯ್ಕೆಯಿದೆ ಕಣ್ಮುಂದೆ ನೂರಾರು
ಒಲಿ ಇಷ್ಟವಾದುದಕೆ – ಮುದ್ದುರಾಮ

## Happy Birthday Wishes



Dr. Nirmala Shivanand
12th March



S. Krishna Murthy (Ramu)
19th March



Raghuram Bhatt H. S.
23rd March



Srikanth Nadig
25th March




V. Sreenivasa
30th March

## Happy Wedding Anniversary



| | |
|---|---|
| Dr.R.D.Prabhu&Dr.Usha R. Prabhu | 6th March |
| B.K.Govindaraj& Sujatha | 10th March |
| Mani M.N.S. &Vijayashree | 27th March, |
| Viswendra B.N. &Suneetha | 30th March |

MAR




### 9. Water and Sanitation Month

- Provide clean drinking water facilities at railway stations, bus stations, schools or any public places.
- Create awareness on Water Conservation and Sanitation/ Hygiene near water resources.
- Arrange Public Toilet facilities and create awareness about hygiene.
- Create sewage/ underground drainage facilities in economically backward areas.
- Have Talks Sessions to impart knowledge about rain water harvesting and recycling used water.

To,

Book Post

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495